IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಚಾರಿತ್ರಿಕ ಹಿನ್ನೆಲೆಯಲ್ಲಿ ಚನ್ನದಾಸ ಸಮುದಾಯ

ಪ್ರದೀಪ ಎಚ್
ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಾಗೈತಿಹಾಸ ಕಾಲದಲ್ಲಿ ಮಾನವನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆಯುತ್ತಾ ಜೀವನ ಸಾಗಿಸುತ್ತಿದ್ದ. ಆನಂತರ ಒಂದೆಡೆ ನಿಂತು ಜೀವನ ಆರಂಭಿಸಿರುವುದನ್ನು ನಾಗರಿಕತೆಗಳಲ್ಲಿ ತಿಳಿಯಲಾಗಿದೆ. ಜನಜೀವನವು ವೃತ್ತಿ ಕಾರ್ಯಗಳನ್ನು ಮಾಡುತ್ತಾ ಸಾಮಾಜಿಕವಾಗಿ ಬೇರೂರಲು ಪ್ರಾರಂಭಿಸಿದ ನಂತರ ತನ್ನದೇಯದ ಧಾರ್ಮಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ನಗರ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದನ್ನು ನಾವು ಚರಿತ್ರೆಯಲ್ಲಿ ತಿಳಿಯಬಹುದು. ಕಾಲನಂತರದಲ್ಲಿ ಪ್ರೌಢಿಮೆಯ ಉತ್ತುಂಗದಲ್ಲಿ ಇದ್ದಂತಹ ಈ ನಾಗರಿತೆಯ ಜನರು ಆರ್ಯರ ಬೌದ್ಧಿಕ ಮತ್ತು ಭೌತಿಕ ದಾಳಿಯಿಂದಾಗಿ ಈ ನೆಲದಲ್ಲಿ ವರ್ಣಾಶ್ರಮ ವ್ಯವಸ್ಥೆ ಪ್ರಾರಂಭವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂದು ಶ್ರೇಣಿಕೃತ ವ್ಯವಸ್ಥೆ ರೂಢಿಗೆ ಬಂದಿತು. ನಂತರ 4 ವರ್ಣಗಳು ಅಧಿಕ ಜಾತಿ–ಉಪಜಾತಿಗಳಾಗಿ ಒಡೆದು ಹೋಳಾಗಿ, ಅಖಂಡ ಹರಪ್ಪ ಸಂಸ್ಕೃತಿಯನ್ನು ನಾಶಪಡಿಸಿ ವೈದಿಕ ಸಂಸ್ಕೃತಿಯನ್ನು ಜನಸಮುದಾಯಗಳಲ್ಲಿ ಗಟ್ಟಿಯಾಗಿ ಬೇರೂರುವಂತೆ ಮಾಡಲು ವೈದಿಕರು ಶ್ರಮಿಸಿದ್ದಾರೆ.

ಭಾರತದ ಶ್ರೇಣಿಕೃತ ವ್ಯವಸ್ಥೆಯಲ್ಲಿ ವೈದಿಕಶಾಹಿಗಳು ಮೊದಲ ಸ್ಥಾನದಲ್ಲಿದ್ದರೆ, ಅವರ ಅಧೀನತೆಯಲ್ಲಿ ರಾಜನ್ನನ್ನು, ನಂತರ ಉಳಿದೆಲ್ಲ ಜನಸಾಮಾನ್ಯರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಭಾರತವನ್ನು ವೈದಿಕ ಪರಂಪರೆಯಿಂದ ಕೂಡಿದ ಏಕಸಂಸ್ಕೃತಿಯ ರಾಷ್ಟ್ರವಾಗಿ ಮಾಡಲು ಶ್ರಮಿಸಿದ್ದರು. ಆ ಸಮಯದಲ್ಲಿ ಕ್ರಿ.ಪೂ 6ನೇ ಶತಮಾನದಲ್ಲಿ ವೈದಿಕರ ಕಟ್ಟುಪಾಡುಗಳು, ಮೂಢನಂಬಿಕೆಗಳು, ಜಾತಿಯತೆ, ಮೌಢ್ಯಾಚರಣೆಗಳ ವಿರುದ್ಧವಾಗಿ ಬೌದ್ಧಧರ್ಮ ಮತ್ತು ಜೈನಧರ್ಮವು ತಮ್ಮ ಕರ್ಮಸಿದ್ಧಾಂತಗಳ ಮೂಲಕ ವೈದಿಕಶಾಹಿಯ ವಿರುದ್ಧವಾಗಿ ಸಮಸಮಾಜವನ್ನು ನಿರ್ಮಿಸಲು ಪ್ರವರ್ಧಮಾನಕ್ಕೆ ಬಂದಿತು. ವೈದಿಕರು ಬಹುಸಂಸ್ಕೃತಿಯ ಪರಿಕಲ್ಪನೆಯಲ್ಲಿದ್ದ ಬೌದ್ಧಸಂಸ್ಕೃತಿಯನ್ನು ತೆಗೆದು ಹಾಕಿ, ಜೈನಸಂಸ್ಕೃತಿಯನ್ನು ತೆಕ್ಕೆಗೆ ತೆಗೆದುಕೊಳ್ಳುವುದರ ಜೊತೆಗೆ ಪ್ರಭುತ್ವವನ್ನು ಸಹ ತಮ್ಮ ಹಿಡಿತಕ್ಕೆ ತೆಗೆದುಕೊಂಡರು. ಈ ಹಿನ್ನೆಲೆಯಿಂದ ಸ್ಪೃಶ್ಯ–ಅಸ್ಪೃಶ್ಯರ ಪರಿಕಲ್ಪನೆ ಬೆಳೆದು ಬಂದಿತು. ಆನಂತರ ಮನುಷ್ಯ–ಮನುಷ್ಯನನ್ನು ಮುಟ್ಟಿಸಿಕೊಳ್ಳದಷ್ಟು ಅನಾಗರಿಕನಾಗಿ, ಅಮಾನವೀಯ ಆಚರಣೆ ಸಂಪ್ರದಾಯಗಳನ್ನು ರೂಢಿಗೆ ತಂದರು. ಈ ವ್ಯವಸ್ಥೆಯಲ್ಲಿ ಮೇಲ್ವರ್ಗದ ಜನರಿಂದ ಶೋಷಣೆಗೆ ಒಳಗಾದಂತಹ ಅಸ್ಪೃಶ್ಯ ಸಮುದಾಯಗಳ ಸಾಲಿನಲ್ಲಿ ಚನ್ನದಾಸ ಸಮುದಾಯವು ಸಹ ಒಂದಾಗಿದೆ.

ಎ.ಸಿ ದಾಸ ಅವರು ಹೇಳುವಂತಯೆ "ದಾಸರು ಮತ್ತು ದಸ್ಯುಗಳು ಕಾಡುಜನಗಳಿರಬೇಕು ಇಲ್ಲವೆ ವೇದಗಳ ಕಾಲಕ್ಕೆ ಹೊರತಾದ ಆರ್ಯ ಬುಡಕಟ್ಟಿನ ಜನಾಂಗಗಳಾಗಿರಬೇಕು. ಯುದ್ಧದಲ್ಲಿ ಸೆರೆಯಾಳಾಗಿ ಕೊಂಡೊಯ್ಯಲ್ಪಟ್ಟವರು ಗುಲಾಮರೆಂದು ನಡೆಸಿಕೊಳ್ಳಲ್ಪಟ್ಟು ಅವರದೇ ಆದ ಶೂದ್ರ ಜಾತಿಯೊಂಬುದೊಂದು ಹುಟ್ಟಿಕೊಂಡಿರಬೇಕು" ಎಂದು ಹೇಳಿದರು.

ಶ್ರೀ ಕಾಣೆ ಅವರ ಅಭಿಪ್ರಾಯದಂತೆ "ದಾಸ ಎಂಬ ಶಬ್ದ ನಂತರದಲ್ಲಿ ಸಾಹಿತ್ಯಾದಲ್ಲಿ ತೊತ್ತು ಅಥವಾ ಗುಲಾಮ ಎಂಬ ಅರ್ಥ ಪಡೆದಿದೆ. ಋಗ್ವೇದದ ಕಾಲದಲ್ಲಿ ಆರ್ಯರಿಗೆ ಎದುರಾಗಿ ನಿಂತಂಥ ಈ ದಾಸ ಬುಡಕಟ್ಟಿನ ಜನಾಂಗಗಳು ಕ್ರಮೇಣವಾಗಿ ಆರ್ಯರಿಗೆ ಶರಣಾಗರಾಗಿ ಅವರ ದಾಸರಾಗಿಬೇಕು". ಆರ್ಯರ ಸಮಾಜದ ಅಂಚಿನಲ್ಲಿ ಸ್ಥಾನಗಳಿಸಿದ್ದ ದಾಸರನ್ನೂ ಮತ್ತು ದಾಸರನ್ನು ಮದುವೆಯಾಗಿ ಅವರ ನಡೆನುಡಿಗಳನ್ನು ಅಳವಡಿಸಿಕೊಂಡವರನ್ನೂ ಹೊರಗಿಡುವುದಕ್ಕಾಗಿ ವರ್ಣವಿಭಜನೆ ಇನ್ನಷ್ಟು ಕಠಿಣವಾಯಿತು. ಸಾಮಾಜಿಕ ಸ್ಥಾನಮಾನಗಳಲ್ಲಿ ದಾಸರು ಕೆಳಮಟ್ಟದಲ್ಲಿ ಇದ್ದರು ಎಂದು ಹೇಳಿದ್ದಾರೆ. ಅಂದರೆ ದ್ರಾವಿಡರು ಆರ್ಯರನ್ನು ಎದುರಿಸಿ ಹೋರಾಡಿದ್ದದರಿಂದಾಗಿ ಅವರಿಂದ ದಾಸರೆನಿಸಿಕೊಂಡರು. ನಂತರದ ದಿನಮಾನಗಳಲ್ಲಿ ಉತ್ತರ

ಭಾರತದಿಂದ ದ್ರಾವಿಡರನ್ನು ಸೋಲಿಸಿದ ಆರ್ಯರು ಅವರನ್ನು ದಾಸರನ್ನಾಗಿಸಿಕೊಂಡು ದಾಸ, ದಸ್ಯುಗಳೆಂದು ಕರೆದರು. ಭಾರತಕ್ಕೆ ಮಧ್ಯಏಷ್ಯಾದಿಂದ ಆಗಮನ ಮಾಡಿದಂತಹ ಆರ್ಯರು ಈ ದೇಶದ ಮೂಲನಿವಾಸಿಗಳೆನಿಸಿದ ದ್ರಾವಿಡರು ಮತ್ತು ಅವರ ನಾಗರಿಕತೆಯ ಮೇಲೆ ದಾಳಿ ಮಾಡಿ ಈ ಮೂಲ ನಿವಾಸಿಗಳನ್ನು ನಿಯಂತ್ರಿಸಿದರು. ಹಾಗೆಯೇ ಶೂದ್ರರು, ಅತಿಶೂದ್ರರೆಂದು ಪ್ರತ್ಯೇಕಗೊಳಿಸಿ, ಶೋಷಣೆಗೆ ಒಳಪಡಿಸಿಕೊಂಡು ಭಾರತೀಯ ಸ್ಪೃಶ್ಯ ಸಮಾಜವನ್ನು ನಿರ್ಮಾಣ ಮಾಡಿಕೊಂಡರು.

ಚನ್ನದಾಸ ಸಮುದಾಯವು ಹೆಸರೆ ಸೂಚಿಸುದಂತೆ ದಾಸಪರಂಪರೆಯ ಹಿನ್ನೆಲೆಯಿಂದ ಹುಟ್ಟಿಕೊಂಡಿರುವಂತದ್ದು, ಗುರುರಾಜ ಪೋಶೆಟ್ಟಿಹಳ್ಳಿ. ದಾಸಪಂಥ ಎಂಬ ಕೃತಿಯಲ್ಲಿ ಅವರು ಹೇಳುವಂತೆ "ದಾಸ ಪರಂಪರೆ ಎಂದರೆ ವಿಷ್ಣುವಿನ ಜ್ಞಾನವನ್ನು ಪಡೆಯುವ ಮಾರ್ಗವನ್ನು ಜನಸಾಮಾನ್ಯರಿಗೆ ಒಪ್ಪುವ ರೀತಿ ಪ್ರಸಾರ ಮಾಡುವುದೇ ದಾಸಪಂಥ". ಅಂದರೆ ಈ ಪಂಥ ಬೌದ್ಧ, ಜೈನ, ಕ್ರೈಸ್ತಧರ್ಮ ಅಥವಾ ಇನ್ಯಾವುದೇ ಧರ್ಮದಿಂದ ಬಂದಿರುವುದಿಲ್ಲ, ಅದು ಹುಟ್ಟಿಕೊಂಡಿದ್ದು ವೈದಿಕ ಸಂಬಂಧಿತ ಶ್ರೀವೈಷ್ಣವ ಮತದ ಹಿನ್ನೆಲೆಯಿಂದ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

10ನೇ ಶತಮಾನದಲ್ಲಿ ದ್ರಾವಿಡನಾಡಿನಲ್ಲಿ ಆಳ್ವಿಕೆಮಾಡಿದ 1ನೇ ಕುಲೋತ್ತುಂಗ ಚೋಳನು ನೆಲಮೂಲ ಸಂಸ್ಕೃತಿಯಾದ ಶೈವಪಂಥವನ್ನು ಅಳವಡಿಸಿಕೊಂಡಿದ್ದ ಅದೇ ಸಮಯದಲ್ಲಿ ತಮಿಳುನಾಡಿನಲ್ಲಿ ರಾಮನುಜಾಚಾರ್ಯರು ದ್ರಾವಿಡ ಸಂಸ್ಕೃತಿಗೆ ವಿರುದ್ಧವಾಗಿ ವೈಷ್ಣವಪಂಥವನ್ನು ಭೋದಿಸಿ ವಿಷ್ಣುವನ್ನು ಪೂಜಿಸುವುದರ ಜೊತೆಗೆ ಜನರನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಶಿವನನ್ನು ಸಹ ವಿಷ್ಣುವಿನ ಅವತಾರ ಎಂದು ಹೇಳಿ ಗಣಪತಿಯನ್ನು ಸಹ ವೈಷ್ಣವೀಕರಣ ಗೊಳಿಸಿದರು. ಇದರಿಂದ ಬಹುದೊಡ್ಡ ಧರ್ಮಪ್ರತಿಪಾದನೆ ಮಾಡಲು ಬಹುಜನರನ್ನು ತನ್ನ ತೆಕ್ಕೆಗೆ ತೆಗೆದುಕೊಂಡರು. ವೈದಿಕೀರಣ ಭಾರತದಲ್ಲಿ ಪ್ರಭಾವ ಬೀರಲು ಆರಂಭಗೊಂಡ ಸಮಯದಲ್ಲಿ ಬೌದ್ಧರನ್ನು ನಾಶಮಾಡಿ ಅವರನ್ನು ಶೈವಪಂಥಕ್ಕೆ ಸೇರಿಸಿಕೊಳ್ಳುವುದರ ಜೊತೆಗೆ, ಜೈನರನ್ನು ಸಹ ವೈಷ್ಣವೀಕರಣ ಗೊಳಿಸಿದರು. ಹೀಗೆ ರಾಮಾನುಜಾಚಾರ್ಯರು ಬಹುದೊಡ್ಡ ಧಾರ್ಮಿಕ ಇಕ್ಕಟ್ಟು-ಬಿಕ್ಕಟುಗಳನ್ನು ಭಾರತದಲ್ಲಿ ಸೃಷ್ಠಿಸಿದರು. ಭಾರತದಲ್ಲಿ ಧರ್ಮದ ಬಗ್ಗೆ ಮೊದಲು ಮಾತನಾಡಲು ಆರಂಭಗೊಂಡಿದ್ದೆ ರಾಮಾನುಜಾಚಾರ್ಯರ ಕಾಲದಲ್ಲಿ. ಇದೇ ಸಮಯದಲ್ಲಿ ವೈಷ್ಣವ ಪರಂಪರೆಯನ್ನು ತನ್ನ ಗೀತೆಗಳ ಮೂಲಕ ಪ್ರಚಾರ ಮಾಡುವುದರ ಜೊತೆಗೆ ಅಲ್ಲಿನ ತಳಸಮುದಾಯದ ಜನರಿಗೆ ವೈಷ್ಣವ ದೀಕ್ಷೆಯನ್ನು ನೀಡಿ ವಿಷ್ಣುವಿಗೆ ದಾಸನನ್ನಾಗಿ ಮಾಡುತ್ತಿದ್ದರು. ಇದನ್ನು ಕಂಡ ಕುಲೋತ್ತುಂಗಚೋಳ ರಾಮನುಜಾಚಾರ್ಯರನ್ನು ತಮಿಳುನಾಡಿನಿಂದ ಗಡಿಪಾರು ಮಾಡಿದನು. ಗಡಿಪಾರದ ರಾಮನುಜಾಚಾರ್ಯರು ಹಾಗೂ ದೀಕ್ಷೆಪಡೆದ ಅವರ ಹಿಂಬಾಲಕರನ್ನು ಕರೆದುಕೊಂಡು ಕರ್ನಾಟಕಕ್ಕೆ ಚಾಮರಾಜನಗರ, ಕೊಳ್ಳೇಗಾಲ, ಶ್ರೀರಂಗಪಟ್ಟಣ, ಕೆರೆತೊಣ್ಣೂರು ಮೂಲಕ ಮೇಲುಕೋಟೆಗೆ ಬಂದು ನೆಲೆಸಿದರು. ಆ ಸಮಯದಲ್ಲಿ ಅವರನ್ನು ಪ್ರೀತಿಪೂರ್ವಕ ಗೌರವಗಳೊಂದಿಗೆ ಅವರನ್ನು ಸ್ವಾಗತಿಸಿ ಆಶ್ರಯ ನೀಡಿದವರು ಅಂದಿನ ಪ್ರಮುಖ ಅರಸ ಜೈನಧರ್ಮದ ಅನುಯಾಯಿಯಾದ ಬಿಟ್ಟಿದೇವ. ಆನಂತರ ರಾಮನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಶ್ರೀವೈಷ್ಣವ ಮತಕ್ಕೆ ಮಂತಾತರಗೊಂಡನು, ಇದು ಕನ್ನಡ ನಾಡಿನ ಮೊದಲ ಮತಾಂತರ ಪ್ರಕ್ರಿಯೇ ಆರಂಭಗೊಂಡ ಕಾಲವಾಗಿದೆ. ಜೊತೆಗೆ ಬಿಟ್ಟಿದೇವ ಅಲ್ಲಿಂದ ವಿಷ್ಣುವರ್ಧನನಾದನು. ನಂತರ ಅಸ್ಪೃಶ್ಯರನ್ನು ಕೂಡ ಶ್ರೀವೈಷ್ಣವ ಧರ್ಮಕ್ಕೆ ಮತಾಂತರಿಸಿದನು. ಅಂದರೆ ಅಲ್ಲಿನ ಜನರು ಸಹ "ಯಥಾ ರಾಜ ತಥಾ ಪ್ರಜಾ" ಎಂಬ ಮಾತಿನಂತೆ ರಾಜ ಯಾವಾಗ ಶ್ರೀವೈಷ್ಣವ ಧರ್ಮ ಸ್ವೀಕರಿಸಿದನೊ ನಂತರ ಅಲ್ಲಿನ ತಳಸಮುದಾಯದ ಜನರು ಭೂಮಿಗಾಗಿ, ನಿವೇಶನಕ್ಕಾಗಿ, ಆರ್ಥಿಕತೆಯ ಹಿತದೃಷ್ಟಿಯಿಂದ ಹಾಗೂ ಸಾಮಾಜಿಕ ಶೋಷಣೆಯ ಮುಕ್ತಿಗಾಗಿ ದಾಸ ಪರಂಪರೆಗೆ ಸೇರಿಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಇಂದಿಗೂ ಮೇಲುಕೋಟೆಯ ಚಲುವನಾರಾಯಣ ದೇವಾಲಯಕ್ಕೆ ವರ್ಷಕ್ಕೆ ಒಂದು ಬಾರಿ ದಲಿತ ಸಮುದಾಯದ ಜನರು ಗರ್ಭಗುಡಿಗೆ ಹೋಗಿ ಪೂಜೆ ಸಲ್ಲಿಸುತ್ತಿರುವುದು ಇಂದಿಗೂ ವಾಡಿಕೆಯಾಗಿ ಕಂಡುಬರುತ್ತದೆ. ಹೀಗೆ ದಾಸ ಪರಂಪರೆ ಹುಟ್ಟಿಕೊಂಡು ಪ್ರತಿಹಳ್ಳಿಗಳಲ್ಲೂ ಶ್ರೀವೈಷ್ಣವ ಮತ ಹಾಗೂ ದಾಸಪಂಥದ ಅನುಯಾಯಿಗಳಾಗಿದ್ದಾರೆ. ಈ ದೇಶದ ತಳಸಮುದಾಯಗಳಿಗೆ ಸಂಬಂಧಿತ ಉಪಜಾತಿಯಾಗಿದ್ದ ಚನ್ನದಾಸ ಸಮುದಾಯದ ಜನರನ್ನು ಇತರೆ ಜನಾಂಗದ ಜನರು ವಿಷ್ಣುವಿನ ಪ್ರತಿನಿಧಿಯಾಗಿ ಕಲ್ಪಿಸಿಕೊಂಡು ಹುಟ್ಟು, ಸಾವು, ಹಬ್ಬ-ಹರಿದಿನಗಳಲ್ಲಿ ಇವರಿಂದ ಪೂಜಾಕಾರ್ಯವನ್ನು ಮಾಡಿಸುವುದು ಕಂಡುಬರುತ್ತದೆ. ಈ ಹಿನ್ನೆಲೆಯಿಂದಲೇ ಅಂದಿನ ತಳಸಮುದಾಯದ ಜನವರ್ಗವು ದಾಸ ಪರಂಪರೆಗೆ ಸೇರ್ಪಡೆಗೊಂಡಿದ್ದಾರೆ. ನಂತರದ ಕಾಲಘಟ್ಟದಲ್ಲಿ ಮಧ್ವಚಾರ್ಯರು ಸಹ ಕರ್ನಾಟಕದ ಉಡುಪಿಯಲ್ಲಿ ನಂತರ ವೈಷ್ಣವ ದೀಕ್ಷೆಯನ್ನು ಪಡೆದು ರಾಮನುಜಾಚಾರ್ಯರ ಉತ್ತರಾಧಿಕಾರಿಯಾಗಿ ವೈಷ್ಣವ ಪಂಥವನ್ನು ಪ್ರಚಾರ ಮಾಡುವುದರ ಜೊತೆಗೆ ತಳಸಮುದಾಯದ ಜನರಿಗೆ ದೀಕ್ಷೆ ನೀಡಿ ವಿಷ್ಣುವಿನ ದಾಸರನ್ನಾಗಿ ಪರಿವರ್ತಿಸಿದರು.

12ನೇ ಶತಮಾನದಲ್ಲಿ ಹುಟ್ಟಿದ ಬಸವಣ್ಣ ವೈದಿಕ ಧರ್ಮದಕಟ್ಟುಪಾಡುಗಳ ವಿರುದ್ಧ ಪ್ರತಿಭಟಿಸುವುದರೊಂದಿಗೆ ಭಾರತದ ಮೂಲ ಧರ್ಮವಾದ ಶೈವಪಂಥವನ್ನು, ವೈಷ್ಣವ ಪಂಥದಿಂದ ಪ್ರತ್ಯೇಕಿಸಲು ಪ್ರಯತ್ನಿಸಿದರು. ನಂತರ ಕಾಯಕ ಸಿದ್ಧಾಂತದ ಮೂಲಕ ಲಿಂಗಾಯತಧರ್ಮವನ್ನು ತಳಸಮುದಾಯಗಳ ಉದ್ಧಾರಕ್ಕಾಗಿ ಸ್ಥಾಪಿಸಿದರು. ವಚನ ಚಳವಳಿಯ ಮೂಲಕ ಜನರಲ್ಲಿ ಸಾಮಾಜಿಕ ಅರಿವು ಮೂಡಿಸುವುದರ ಜೊತೆಗೆ ಲಿಂಗತಾರತಮ್ಯ, ಸಾಮಾಜಿಕತಾರತಮ್ಯ, ಮೂಢನಂಬಿಕೆಗಳನ್ನು ವಿರೋಧಿಸಿದರು.

ಸಮಾಜದಲ್ಲಿನ ಹಲವಾರು ಸಮಸ್ಯೆಗಳನ್ನು ಕುರಿತು ಚರ್ಚಿಸಲು ಅನುಭವ ಮಂಟಪವನ್ನು ಸ್ಥಾಪಿಸಿ ಎಲ್ಲಾ ಜಾತಿಯ ಜನರ ಸಾಮಾಜಿಕ ಆರ್ಥಿಕ ಹಿನ್ನೆಲೆಯಿಂದ ಪುರುಷ ಮತ್ತು ಮಹಿಳೆಯರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಿದರು. ಬಸವ, ಬಸವಾದಿ ಶರಣ–ಶರಣೆಯರು ಸಮಾಜದಲ್ಲಿನ ಜಾತಿವ್ಯವಸ್ಥೆಯ ವಿರುದ್ಧವಾಗಿ ಪ್ರತಿಭಟಿಸುವುದರ ಜೊತೆಗೆ ಅಂತರಜಾತಿಯ ವಿವಾಹವನ್ನು ಮಾಡಿದರು. ಇದನ್ನು ಸಹಿಸದ ವೈದಿಕಶಾಹಿಗಳು ರಾಜನಿಗೆ ಪಿತೂರಿ ಮಾಡುವುದರ ಮೂಲಕ ಬಸವಣ್ಣನ ಸಾವಿಗೆ ಕಾರಣರಾದರು ಎಂಬುದು ಚರಿತ್ರೆ ಪುಟಗಳಲ್ಲಿ ದಾಖಲಾಗಿದೆ. 12ನೇ ಶತಮಾನದ ಕಾಲಘಟ್ಟದಲ್ಲಿ ಬಸವಣ್ಣ, ಬಸವಾದಿ ಶರಣ ಶರಣೆಯರು ಮತ್ತು ಸಾಂಸ್ಕೃತಿಕ ನಾಯಕರಾದ ಮಾದಪ್ಪ, ಮಂಟೇಸ್ವಾಮಿ, ಜುಂಜಪ್ಪ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮೈಲಾರಲಿಂಗ, ಇಂತಹ ಹಲವಾರು ಮಹನೀಯರು ತಮ್ಮ ಕಾಯಕತತ್ವ ಸಿದ್ಧಾಂತದ ಮೂಲಕ, ಜನ ಸಮುದಾಯಗಳಲ್ಲಿ ತಮ್ಮ ಕಾಯಕದ ಪ್ರವೃತ್ತಿಗೆ ಪ್ರೇರಣೆ ನೀಡಿದ್ದಾರೆ. ಮೌಢ್ಯಾಚಾರಣೆಗಳಿಂದ ಕೂಡಿದ ಈ ಸಮಾಜದಲ್ಲಿ ಹೊಸ ಬಗೆಯ ತತ್ವಸಿದ್ಧಾಂತವನ್ನು ಬಸವಣ್ಣನವರ ಹಾದಿಯಲ್ಲಿ ಕರ್ನಾಟಕದಾದ್ಯಂತ ಹರಡಿದರು. ನಂತರ ಬಸವಣ್ಣನ ಹಾದಿಯಲ್ಲಿಯೇ 15 ಮತ್ತು 16ನೇ ಶತಮಾನದಲ್ಲಿ ಕನಕದಾಸರು, ಪುರಂದರದಾಸರು ಸಮಾಜದಲ್ಲಿನ ಜಾತಿವ್ಯವಸ್ಥೆ, ಅಂಧ ಅಚರಣೆಗಳ ವಿರುದ್ಧವಾಗಿ ತತ್ವಪದ ಮತ್ತು ಕೀರ್ತನೆಗಳನ್ನು ಹಾಡುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಮುಂದಾದರು.

ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದ ವಿಜಯನಗರ ಸಾಮ್ರಾಜ್ಯ ತುಳುವ ಮನೆತನದ ಕಾಲಘಟ್ಟದ ದಾಸಕೂಟದಲ್ಲಿ ಚನ್ನದಾಸ ಸಮುದಾಯದ ಜನರು ರಾಜನನ್ನು ಮೆಚ್ಚುಗೆ ಪಡಿಸಲು ತತ್ವಪದಗಳನ್ನು ಹಾಡುವುದು, ಹರಿನಾಮಸ್ಮರಣೆ ಮಾಡುವುದರ ಜೊತೆಗೆ, ಅಂದಿನ ಕಾಲದ ಸಮಾಜ ವ್ಯವಸ್ಥೆಯಲ್ಲಿನ ಮೌಢ್ಯಾಚರಣೆಗಳನ್ನು ತಮ್ಮ ತತ್ವಪದಗಳ ಮೂಲಕ ಹೇಳುವುದು ಇವರ ಕೆಲಸವಾಗಿತ್ತು. ನಂತರ ಯಾವಾಗ ವಿಜಯನಗರ ಸಾಮ್ರಾಜ್ಯ 1565 ರಲ್ಲಿ ತಾಳಿಕೋಟೆ ಯುದ್ಧದಲ್ಲಿ ಸೋತು ಪತನದ ಹಾದಿ ಹಿಡಿಯಿತೊ, ಆಗ ಈ ಸಮುದಾಯದ ಜನರು ಕರ್ನಾಟಕ ಕೆಲವು ಭಾಗಗಳಲ್ಲಿ ಚದುರಿಹೋದರು. ಅಲ್ಲಿಯೇ ತಮ್ಮ ಮೂಲ ವೃತ್ತಿಯದ ಕೀರ್ತನೆಗಳನ್ನು ಹಾಡುವುದರ ಮೂಲಕ ಭಿಕ್ಷಾಟಾನೆಯನ್ನು ಮಾಡುತ್ತಾ ಜೀವನ ಸಾಗಿಸುತ್ತಿದ್ದರು.

ಭಾರತಕ್ಕೆ ಆಗಮಿಸಿದ ಯುರೋಪಿಯನ್ನರು ಮೊದಮೊದಲು ಭಾರತದಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸುವುದರ ಜೊತೆಗೆ ಈ ದೇಶದ ಜನರ ಆಚಾರ ವಿಚಾರ, ಸಂಸ್ಕೃತಿ, ಭಾಷೆ, ಇಂತಹ ಹಲವಾರು ಅಂಶಗಳನ್ನು ಒಳಗೊಂಡಂತೆ ಸಮಾಜದಲ್ಲಿ ಇವರ ಸ್ಥಾನಮಾನಗಳ ಕುರಿತು ಅಧ್ಯಯನ ಮಾಡಲು ಆರಂಭಿಸಿದರು. ನಂತರ ದಿನಮಾನಗಳಲ್ಲಿ ಬ್ರಿಟಿಷರು ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡ ನಂತರ ಭಾರತದಲ್ಲಿ ಹಲವಾರು ಕಾಯ್ದೆ ಕಾನೂನುಗಳನ್ನು ಸಹ ಅವರು ಜಾರಿಗೊಳಿಸಿದರು. ಅದರಲ್ಲಿ ಬಹಳ ಮುಖ್ಯವಾಗಿ 1871ರಲ್ಲಿ ಕ್ರಿಮಿನಲ್ ಕ ಟ್ರೈಬ್ಸ್ ಆಕ್ಟ್ ಜಾರಿಗೊಳಿಸುವುದರ ಮೂಲಕ ಸಂಚಾರಿ ಜಾತಿಗಳನ್ನು ಒಂದೆಡೆ ನೆಲೆ ನಿಲ್ಲುವಂತೆ ಮಾಡಿದರು. ಕಾರಣ ಇಷ್ಟೇ ಈ ಅಲೆಮಾರಿ ಜಾತಿಗಳು ಸ್ವಾತಂತ್ರ ಹೋರಾಟದಲ್ಲಿ ಹೋರಾಟಗಾರರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಮಾಹಿತಿಯನ್ನು ವಿಲೇವಾರಿ ಮಾಡುವುದರ ಜೊತೆಗೆ ಅವರನ್ನು ಒಗ್ಗೂಡಿಸುವ ಒಂದು ಮನೋಭಾವನೆಯನ್ನು ಹೊಂದಿದ್ದರಿಂದ ಇವರನ್ನು ನಿಯಂತ್ರಿಸಲು ಅಲೆಮಾರಿಗಳನ್ನು ಊರವರಿಗೆ ಒಂದೇ ಕಡೆ ನೆಲೆಸುವಂತೆ ಮಾಡಿದರು. ಈ ನೆಲೆ ನಿಂತ ಅಲೆಮಾರಿಗಳಲ್ಲಿ ಚೆನ್ನದಾಸರು ಸಹ ಒಳಗೊಂಡಿದ್ದರು. ಕಾಯ್ದೆ ಮುಖಾಂತರ ಬ್ರಿಟಿಷರು ನೆಲೆಸುವಂತೆ ಮಾಡಿದರು ಸಹ ಅಲೆಮಾರಿಗಳು ತಮ್ಮ ಕುಲವೃತ್ತಿಯಾದಂತಹ ಧಾರ್ಮಿಕ ಭಿಕ್ಷಾಟನೆಯನ್ನು ಮಾಡಿಕೊಂಡೆ ಜೀವಿಸಬೇಕಾಗಿತ್ತು. ಏಕೆಂದರೆ ಅವರಿಗೆ ಜೀವನ ನಡೆಸಲು ತುಂಡುಭೂಮಿಯು ಇಲ್ಲದಿದ್ದಂತಹ ಅವರಿಗೆ ಬಿಕ್ಷಾಟನೆ ಮಾಡಿಯೇ ಜೀವಿಸಬೇಕಾಗಿತ್ತು. ಆಗ ಅವರು ಒಂದು ಕಡೆ ಅವರ ಕುಟುಂಬವನ್ನು ನೆಲೆಸುವಂತೆ ಮಾಡಿ ಅವರು ಸುತ್ತಮುತ್ತಲಿನ ಊರುಗಳಿಗೆ ಹೋಗಿ ಧಾರ್ಮಿಕ ಭಿಕ್ಷಾಟನೆಯನ್ನು ಮಾಡುವುದರ ಜೊತೆಗೆ ಬದಲಿರುತ್ತಿಗಳಾದಂತಹ ನಾಟಕಗಳನ್ನು ಆಡುವುದು, ತತ್ವಪದಗಳನಾಡುವುದು, ಮಹಿಳೆಯರು ವ್ಯಾಪಾರ ಮುಂದಾದರು.

ಇಂತಹ ಹಲವು ಸಂದರ್ಭಗಳಲ್ಲಿ ಸ್ವಾತಂತ್ರ ಪೂರ್ವ ಭಾರತದಿಂದ ಆರಂಭಿಸಿ ಸ್ವಾತಂತ್ರ್ಯ ನಂತರದ ಭಾರತದಲ್ಲಿಯೂ ಸಹ ಈ ಅಲೆಮಾರಿ ಜಾತಿ ಆದಂತಹ ಚೆನ್ನದಾಸರು ಇಂದಿಗೂ ಸಹ ತುಂಡುಭೂಮಿ ಇಲ್ಲದೆ ಊರವರೆಗಿನ ಖಾಸಗಿ ಅಥವಾ ಸರ್ಕಾರಿ ಭೂಮಿಯಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಕರ್ನಾಟಕದದ್ಯಾಂತ ಇಂದಿಗೂ ನೆನಸಿರುವುದು ಕಂಡುಬರುತ್ತದೆ. ಶೇಕಡ 90ರಷ್ಟು ಕುಟುಂಬಗಳು ಇನ್ನೂ ಸಹ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಅಲೆಮಾರಿ ಜೀವನವನ್ನೇ ನಡೆಸಿರುವುದು ಕಾಣಬಹುದು. ಇಂತಹ ಅಲೆಮಾರಿಗಳಿಗೆ ಮೂಲಭೂತ ಸೌಕರ್ಯಗಳು ಹಾಗೂ ಸರ್ಕಾರಿ ಸ್ಥಾನಮಾನಗಳು ದೊರೆಯಬೇಕೆಂದು ಎಚ್.ಎಸ್ ನಾಗಮೋಹನ್ ದಾಸ್ ಅವರು ಒಳ ಮೀಸಲಾತಿಯಲ್ಲಿ ಪ್ರತ್ಯೇಕ 1% ಮೀಸಲಾತಿ ನೀಡಿದರು ಸರ್ಕಾರ ಪರಿಶಿಷ್ಟ ಜಾತಿಯ 49 ಅಲೆಮಾರಿಗಳು ಹಾಗೂ 10 ಸೂಕ್ಷ್ಮಜಾತಿಗಳನ್ನು ಸಿ ಗುಂಪಿನಲ್ಲಿ ಸೇರಿಸುವುದರ ಮೂಲಕ ಮತ್ತೊಂದು ಬಹುದೊಡ್ಡ ಅನ್ಯಾಯವಾಗಿದೆ. ಇಂತಹ ಹಲವಾರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವ ಚನ್ನದಾಸರ ಕುರಿತು ಅಧ್ಯಯನಗಳು ನಡೆಯಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


- ಅರವಿಂದ ಮಾಲಗತ್ತಿ. 2006, 'ಕನ್ನಡ ಜಾನಪದ ವಿಶ್ವಕೋಶ'. ಮೈಸೂರು ವಿಶ್ವವಿದ್ಯಾಲಯ. ಮೈಸೂರು
- ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು. 'ದಾಸ ಜನಾಂಗ'. ರಾಯಚೂರು ಮತ್ತು ಬಳ್ಳಾರಿ ಜಿಲ್ಲಾ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘದ ಕಿರು ಪುಸ್ತಕ.
- ಕಲಬುರ್ಗಿ ಎಂ.ಎಂ, 1994, 'ಕರ್ನಾಟಕದ ಕೈಫಿಯತ್ತುಗಳು'. ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಕುಪ್ಪೆ ನಾಗರಾಜ, 2008, 'ದೊಂಬಿದಾಸ'. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
- ಕುಪ್ಪೆ ನಾಗರಾಜ, 2008, 'ಏಕತಾರಿ'. ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘ. ಮೈಸೂರು
- ಚಂದ್ರಶೇಖರ ಕಂಬಾರ. 1985, 'ಕನ್ನಡ ಜಾನಪದ ವಿಶ್ವಕೋಶ'. ಸಂಪುಟ 2 ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
- ಚಿನ್ನಸ್ವಾಮಿ ಸೋಸಲೆ ಎನ್. 2018, 'ದಲಿತರ ಬದುಕು–ಮೆಲುಕು'. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಚಿನ್ನಸ್ವಾಮಿ ಸೋಸಲೆ ಎನ್. 2015, 'ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು'. ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ.
- ನಿರೂಪಮಾ, 2014, 'ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ'(ಅನುವಾದ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಪರಮಶಿವಯ್ಯ ಜೀ.ಶಂ. 1979, 'ದಕ್ಷಿಣ ಕರ್ನಾಟಕದ ಜಾನಪದ ಕಾವ್ಯಪ್ರಕಾರಗಳು'. ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾಲಯ
- ಪರಮಶಿವಯ್ಯ ಜೀ.ಶಂ 1981, 'ಕನ್ನಡ ವೃತ್ತಿ ಗಾಯಕ ಕಾವ್ಯಗಳು'. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
- ಪರಮಶಿವಯ್ಯ ಜೀ.ಶಂ. 1979, 'ದಕ್ಷಿಣ ಕರ್ನಾಟಕದ ಜಾನಪದ ಕಾವ್ಯಪ್ರಕಾರಗಳು'. ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾಲಯ
- ಪರಮಶಿವಯ್ಯ ಜೀ.ಶಂ 1981, 'ಕನ್ನಡ ವೃತ್ತಿ ಗಾಯಕ ಕಾವ್ಯಗಳು'. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
- ಪರಮಶಿವಯ್ಯ. ಜೀ.ಶಂ, 1974, 'ದೊಂಬಿದಾಸರ ಲಾವಣಿಗಳು'. ಸಾಹಿತ್ಯ ಸದನ
- ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಸಂಪುಟ–6)
- ಬಾಶಮ್ ಎ.ಎಮ್. 2021, 'ಪ್ರಾಚೀನ ಭಾರತವೆಂಬ ಅದ್ಭುತ' (ಅನುವಾದ– ಡಿ.ಆರ್. ಮಿರ್ಜಿ) ಐಬಿಎಚ್ ಪ್ರಕಾಶನ ಬೆಂಗಳೂರು
- ಬೋರಲಿಂಗಯ್ಯ ಹಿ.ಚಿ. 2015, 'ಕರ್ನಾಟಕ ಜನಪದ ಕಲೆಗಳ ಕೋಶ'. ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಬೋರಲಿಂಗಯ್ಯ ಹಿ.ಚಿ. 2004, 'ದಾಸಪ್ಪ– ಜೋಗಪ್ಪ'. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
- ಮಲ್ಲಿಕಾರ್ಜುನ ಬಿ ಮಾನ್ಪಡೆ, 2016, 'ಚೆನ್ನದಾಸರ್ ಸಮುದಾಯ.' ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ. ಬೆಂಗಳೂರು.
- ಮೈಸೂರಿನ ಖಾನೇ ಸುಮಾರಿ ವರದಿಯಲ್ಲಿ 1901

- ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ: 'ಕನ್ನಡ ವಿಶ್ವಕೋಶ' ಸಂಪುಟ 9 ಸಿದ್ದರಾಮಯ್ಯ. ಜಿ.ಎಸ್. ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರ.
- ಮೇತ್ರಿ ಕೆ.ಎಂ. 2002, 'ಬುಡಕಟ್ಟು ಹುಲಕಸುಬುಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಮೇತ್ರಿ ಕೆ.ಎಂ 2012, 'ಮರುಗು ಬಾಷೆ'. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಮೇತ್ರಿ ಕೆ,ಎಂ, ಬಾಲಗುರುಮೂರ್ತಿ. (ಸಂ) 'ಕರ್ನಾಟಕ ರಾಜ್ಯ ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ', ಕರ್ನಾಟಕ ರಾಜ್ಯ ಅಲೆಮಾರಿ ಅರೆ ಅಲೆಮಾರಿ ಒಕ್ಕೂಟ ಬೆಂಗಳೂರು.
- ಯಲ್ಲಪ್ಪ ಬಿ ಹಿಮ್ಮಡಿ, 2008, 'ಚೆನ್ನದಾಸರ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
- ರಮೇಶ ಗಬ್ಬೂರ, 2016, 'ಸಂಜೀವಪ್ಪ ಗಬ್ಬೂರ'. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು.
- ಮೋಹನ್‌ಕೃಷ್ಣ ರೈ ಕೆ. 2017, 'ಪ್ರಭುತ್ವ ಮತ್ತು ಜನತೆ ರಾಷ್ಟ್ರಕೂಟರಿಂದ ಹೊಯ್ಸಳರವರೆಗೆ' ವಿಶ್ವವಿದ್ಯಾಲಯ ಹಂಪಿ.